ಕಾನಕಾನಹಳ್ಳಿ ವಾಸುದೇವಾಚಾರ್ಯರು ಮುಂತಾದ ಸಂಗೀತಗಾರರಿದ್ದರು. ಮಹಾರಾಜರಿಗೆ ಹಿಂದೂಸ್ತಾನಿ ಮತ್ತು ಪಾಶ್ಚಾತ್ಯ ಸಂಗೀತದಲ್ಲೂ ಆಸಕ್ತಿ ಇದ್ದುದರಿಂದ ಮೈಸೂರಿಗೆ ಈ ಸಂಗೀತ ಪ್ರಕಾರಗಳು ಹೆಜ್ಜೆ ಇಡಲು ತಡವಾಗಲಿಲ್ಲ.

ಆಸ್ಥಾನ ವಿದ್ವಾಂಸರೆಂದು ನೇಮಕವಾಗುವ ಮೊದಲು ಕಲಾವಿದರು ವೀಣಾ ಭಕ್ತಿಗಳ ಮುಂದೆ ತಮ್ಮ ವಿದ್ಯೆಯನ್ನು ಪ್ರದರ್ಶಿಸಬೇಕಾಗುತ್ತಿತ್ತು. ಪ್ರಭುಗಳ ಮುಂದೆ ನುಡಿಸುವ–ಹಾಡುವ ಯೋಗ್ಯತೆ ಇದೆಯೋ ಇಲ್ಲವೋ ನಿರ್ಧಾರವಾಗಬೇಕಿತ್ತು. ನಂತರವೇ ಪ್ರಭುಗಳ ಮುಂದೆ ಅವರ ವಿನಿಕೆ. ಅಲ್ಲಿ ಮೆಚ್ಚುಗೆಯಾದರೆ, ಆಸ್ಥಾನ ವಿದ್ವಾಂಸರೆಂಬ ಪಟ್ಟ. ಆಸ್ಥಾನ ವಿದ್ವಾಂಸರ ಕೆಲಸವಾದರೂ ಏನಿರುತ್ತಿತ್ತು? ಅದೇನೂ ಸುಮ್ಮನೆ ಕೂಡ್ರಿಸಿ ಸಂಬಳ ಕೊಡುವಂಥದ್ದಲ್ಲ. ಅರಮನೆಯ ಯಾವುದೇ ಪೂಜೆ, ಸಮಾರಂಭದಲ್ಲಿ ನಿಗದಿತ ಸಮಯದಲ್ಲಿ ಹಾಡುವ ಅಥವಾ ನುಡಿಸುವ ಕೆಲಸವಂತೂ ಸರಿ. ಅದಲ್ಲದೆ ಹಿಂದೂಸ್ತಾನಿ ಸಂಗೀತದ ಮಟ್ಟುಗಳನ್ನು ಗ್ರಾಮಾಫೋನಿನಿಂದ ಪುಸ್ತಕಕ್ಕೆ ವರ್ಣಮಟ್ಟಿನಲ್ಲಿ ಬರೆಯುವ, ಪಾಶ್ಚಾತ್ಯ ಸಂಗೀತದ ರೆಕಾರ್ಡುಗಳನ್ನು ಕೇಳಿ, ಅದನ್ನು ಸ್ವರಲಿಪಿಯಲ್ಲಿ ಬರೆದಿಡುವ, ಹೊಸ ಹೊಸ ರಚನೆಗಳನ್ನು ಮಾಡುವ, ಹೊಸ ಪ್ರಯೋಗಗಳನ್ನು ಮಾಡುವ, ಅರಸು ಮಕ್ಕಳಿಗೆ ಕಲಿಸುವ, ಅರಮನೆ ಬ್ಯಾಂಡಿನಲ್ಲಿ ನುಡಿಸುವ, ಸಂಗೀತ ಸಮ್ಮೇಳನಗಳಲ್ಲಿ ಸೋದಾಹರಣ ಭಾಷಣಗಳನ್ನು ಮಾಡುವ ಕೆಲಸಗಳಲ್ಲದೆ, ರಾಯಲ್ ಸ್ಕೂಲ್ ಆಫ್ ಮ್ಯೂಸಿಕ್‌ನಲ್ಲಿ ಸಂಗೀತ ಕಲಿಸುವ ಕೆಲಸವನ್ನೂ ಮಾಡಬೇಕಾಗುತ್ತಿತ್ತು.

ಆಸ್ಥಾನ ವಿದ್ವಾಂಸರ ಸ್ಥಾನವೇನೂ ಸುಲಭದ್ದಾಗಿರಲಿಲ್ಲ. ಪ್ರತ್ಯಕ್ಷ ದೇವರಂತೆ ಇರುತ್ತಿದ್ದ ಮಹಾಪ್ರಭುಗಳೇ ಸ್ವತಃ ಅನೇಕ ವಿಷಯಗಳಲ್ಲಿ ಪಾಂಡಿತ್ಯ ಗಳಿಸಿದ್ದರೆಂದ ಮೇಲೆ ಎಲ್ಲರೂ ಸದಾ ತಮ್ಮ ಎಚ್ಚರಿಕೆಯಲ್ಲಿ ಇರಬೇಕಾದ ಅನಿವಾರ್ಯತೆಯೂ ಇರುತ್ತಿತ್ತು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಮಹಾರಾಜರೇ ಖುದ್ದಾಗಿ ಇದೆಲ್ಲವನ್ನೂ ತಮ್ಮ ಸೂಕ್ಷ್ಮ ದೃಷ್ಟಿಯಿಂದ ಗಮನಿಸುತ್ತಿದ್ದರೆಂಬುದು. ಥಟ್ಟನೆ ಅವರು ಒಡ್ಡುತ್ತಿದ್ದ ಸವಾಲುಗಳನ್ನು ಎದುರಿಸುವ ಎದೆಗಾರಿಕೆಯೂ ಇರಬೇಕಾಗುತ್ತಿತ್ತು. ಅವರೊಡ್ಡುತ್ತಿದ್ದ ಪರೀಕ್ಷೆಗಳಲ್ಲಿ ಉತ್ತೀರ್ಣರಾದರೆ, ಬಹುಮಾನವು ಕಟ್ಟಿಟ್ಟ ಬುತ್ತಿ. ಹೀಗೆ ಆಸ್ಥಾನ ವಿದ್ವಾಂಸರ ಪರಿಶ್ರಮ, ಬುದ್ಧಿವಂತಿಕೆ, ಸಮಯಪ್ರಜ್ಞೆಗಳಿಂದ ಲಾಭವಾದುದು ಸಂಗೀತ ಪ್ರಪಂಚಕ್ಕೆ. ಪ್ರಭುಗಳ ಇಂತಹ ಪ್ರೋತ್ಸಾಹವು ಅನೇಕ ಅಪರೂಪ ರಾಗಗಳಲ್ಲಿ ರಚನೆಗಳು, ಸಪ್ತತಾಳೇಶ್ವರಿ ರಚನೆಗಳು, ಬಳಕೆಯಾಗದ ತಾಳಗಳಲ್ಲಿ ವರ್ಣ, ರಾಗಮಾಲಿಕೆಗಳ ಹುಲುಸಾದ ಬೆಳೆಗೆ ಕಾರಣೀಭೂತವಾಯಿತು.

ಸಾಂಸ್ಕೃತಿಕ ವೈಭವದ ಮೈಸೂರು ಅಂದು ಸಂಗೀತ, ನೃತ್ಯ, ನಾಟಕ ಮುಂತಾದ ಕಲೆಗಳ ಪ್ರಮುಖ ಕೇಂದ್ರವಾಯಿತು. ಹತ್ತೊಂಬತ್ತನೆಯ ಶತಮಾನದಲ್ಲಿ ಮೈಸೂರಿನಲ್ಲಿ ಹೇರಳವಾಗಿ ಗಾಯಕರು, ವೈಣಿಕರು, ವಾಗ್ಗೇಯಕಾರರು ಇದ್ದು, ಕರ್ನಾಟಕ ಸಂಗೀತ ಕ್ಷೇತ್ರವನ್ನು ಸಮೃದ್ಧಿಯಾಗಿಸಿದರು. ಬೇರೆ ರಾಜ್ಯಗಳಿಂದ ಬಂದ ಸಂಗೀತಗಾರರೂ ಸಹ ಆಸ್ಥಾನ ವಿದ್ವಾಂಸರಾಗಿದ್ದುದೂ ಉಂಟು. ಮುತ್ತಯ್ಯ ಭಾಗವತರ್, ಟೈಗರ್ ವರದಾಚಾರ್, ಗೌಹರ್ ಜಾನ್, ಮುತ್ತುಸ್ವಾಮಿ ತೇವರ್, ಆಗ್ರಾದ ಫಯಾಜ್ ಖಾನ್ ಕಲಕತ್ತೆಯ ಬರ್ಖತ್ತುಲ್ಲಾ ಖಾನ್, ಕರೀಂ ಭಕ್ಷಿ ಮುಂತಾದವರಿದ್ದರು.



ಮೈಸೂರು ವಾಸುದೇವಾಚಾರ್ಯರು

ಶೇಷಣ್ಣನವರ ಸಮಕಾಲೀನರಾಗಿದ್ದ ಸುಬ್ಬಣ್ಣ, ಬಿಡಾರಂ ಕೃಷ್ಣಪ್ಪ, ಕಾನಕಾನಹಳ್ಳಿ ವಾಸುದೇವಾಚಾರ್ಯ, ವೀಣೆ ಶಾಮಣ್ಣ, ವೆಂಕಟಗಿರಿಯಪ್ಪ, ವೀಣೆ ಶಿವರಾಮಯ್ಯ, ಬೆಳಕವಾಡಿ ಶ್ರೀನಿವಾಸ ಅಯ್ಯಂಗಾರ್, ಚಿಕ್ಕ ರಾಮರಾಯರು, ಟಿ. ಚೌಡಯ್ಯ ನಂತರ ಬಿ. ದೇವೇಂದ್ರಪ್ಪ, ತಿಟ್ಟೆ ಕೃಷ್ಣಯ್ಯಂಗಾರ್, ಆರ್.ಎಸ್.ಕೇಶವಮೂರ್ತಿ, ಸ್ವರಮೂರ್ತಿ ವಿ.ಎನ್.ರಾವ್, ಚಿಂತಲಪಲ್ಲಿ ವೆಂಕಟರಾವ್ ಮತ್ತು ರಾಮಚಂದ್ರ ರಾವ್, ಶಿವರುದ್ರಪ್ಪ, ಟಿ.ಎಂ. ವೆಂಕಟೇಶ ದೇವರು, ಎಸ್.ಎನ್. ಮರಿಯಪ್ಪ... ಹೀಗೆ ಮೈಸೂರಿನ ಆಸ್ಥಾನ ವಿದ್ವಾಂಸರ ಪಟ್ಟಿ ದೊಡ್ಡದಿದೆ.



ಗಾಯಕರತ್ನ ಬಿಡಾರಂ ಕೃಷ್ಣಪ್ಪನವರು

ಆಗರ್ಭ ಶ್ರೀಮಂತರಾಗಿದ್ದ ವೀಣೆ ಸುಬ್ಬಣ್ಣನವರು ಸಹ ತಮ್ಮ ಸೊಗಸಾದ ವೀಣಾ ವಾದನಕ್ಕೆ ಹೆಸರಾಗಿದ್ದವರು. ಬಿಡಾರಂ ಕೃಷ್ಣಪ್ಪನವರ ಗಾಯನವು ಸಮಕಾಲೀನರಲ್ಲಿ ಬಲು ಪ್ರಸಿದ್ಧವಾಗಿದ್ದಿತು. ಮೈಸೂರಿನಲ್ಲಿ ಇರುವ ಪ್ರಸನ್ನ ಶ್ರೀ ಸೀತಾರಾಮ ಮಂದಿರವು ಸಂಗೀತ ಪ್ರಪಂಚಕ್ಕೆ ಇವರು ನೀಡಿರುವ ಅಜರಾಮರ ಕೊಡುಗೆಯಾಗಿದೆ. 'ಅಭಿನವ ತ್ಯಾಗರಾಜ'ರೆಂದೇ ಪ್ರಸಿದ್ಧರಾದ ವಾಸುದೇವಾಚಾರ್ಯರೂ ಸಹ ತಮ್ಮ ಕೃತಿಗಳಿಂದ ಸಂಗೀತಗಾರರ ಆಪ್ತರಾಗಿದ್ದವರು. ಶೇಷಣ್ಣನವರ ಪ್ರಮುಖ ಶಿಷ್ಯರಲ್ಲಿ ಒಬ್ಬರಾಗಿದ್ದ ವೆಂಕಟಗಿರಿಯಪ್ಪನವರೂ ಸಹ ತಮ್ಮ ಗುರುಗಳಂತೆ ಅನೇಕ ರಚನೆಗಳನ್ನು ಕೊಡುಗೆಯಾಗಿ ನೀಡಿದ್ದಾರೆ. 'ಸ್ವಯಂಭೂ' ಎಂಬ ಕೇವಲ ನಾಲ್ಕು ಸ್ವರಗಳಿರುವ ರಾಗದ ಕರ್ತೃವಾದ ವೀಣಾ ಶಿವರಾಮಯ್ಯನವರು ಅರಮನೆಗೆ ಸಲ್ಲಿಸಿರುವ ಸೇವೆ ಬಲು ದೊಡ್ಡದು. ಮುತ್ತಯ್ಯ ಭಾಗವತರೂ ತಮ್ಮ ಕೊಡುಗೆ ಸಲ್ಲಿಸಿರುವುದು ಸ್ತುತ್ಯರ್ಹ.

ರಾಜಯ್ಯಂಗಾರರು ಪ್ರಚಾರಕ್ಕೆ ತಂದ 'ಜಗದೋದ್ಧಾರನ ದೇವರನಾಮಕ್ಕೆ ರಾಗ ಸಂಯೋಜನೆ ಮಾಡಿದವರು ಬೆಳಕವಾಡಿ ಶ್ರೀನಿವಾಸ ಅಯ್ಯಂಗಾರರು ಎಂಬುದು ಅನೇಕರಿಗೆ ತಿಳಿಯದ ಸಂಗತಿ. ಬೆಳಕವಾಡಿಯವರು 72 ಮೇಳಕರ್ತ ರಾಗಗಳಲ್ಲಿ ಕೃತಿ ರಚನೆಯನ್ನೂ ಮಾಡಿದ್ದಾರೆ. ಹಾಡುತ್ತಿದ್ದ ರಚನೆಯ ಒಳಗಣ ಶಬ್ದ–ಅರ್ಥಕ್ಕೆ ತಕ್ಕಂತೆ ಕಂಠವನ್ನು ಸಂಚು–ಗಾತ್ರ ಮಾಡುವುದರಲ್ಲಿ ಸಿದ್ಧಹಸ್ತರೆಂದೆನಿಸಿದ್ದ ಚಿಕ್ಕರಾಮರಾಯರು ಅರಮನೆಯ ನಾಟಕ ಕಂಪನಿಯಲ್ಲಿ ನಲವತ್ತು ವರ್ಷ ಸೇವೆ ಸಲ್ಲಿಸಿದ್ದಾರೆ. ಮೈಸೂರಿಗೆ ಮೃದಂಗವನ್ನು ಮೊತ್ತಮೊದಲು ಪರಿಚಯಿಸಿದ ಕೀರ್ತಿ ಮುತ್ತುಸ್ವಾಮಿ ತೇವರ್ ಅವರದು. ಒಂಬತ್ತು ದಿನಗಳ ಕಾಲ ಒಂಬತ್ತು ವಾದ್ಯಗಳನ್ನು ಮಹಾರಾಜರ ಎದುರಿಗೆ ನುಡಿಸಿ, 'ಗಾನ ವಿಶಾರದ' ಎಂಬ ಬಿರುದಾಂಕಿತರಾಗಿದ್ದವರು ಬಿ. ದೇವೇಂದ್ರಪ್ಪನವರು. ತಮ್ಮ ಏಳು ತಂತಿಯ ಪಿಟೀಲು ವಾದನಕ್ಕೆ ಹೆಸರಾಗಿದ್ದ ಚೌಡಯ್ಯನವರ ಜನಪ್ರಿಯತೆ ಅಗಾಧ.

ಮೈಸೂರಿಗೆ ಈಜಿಪ್ಟಿನಿಂದ ಆಗಷ್ಟೇ ಆಗಮಿಸಿದ್ದ 'ಹಾರ್ಪ್' ವಾದ್ಯವನ್ನು ಯಾರು ಕಲಿಯಲು ಸಿದ್ಧರಿದ್ದೀರಿ?' ಎಂದು ಮಹಾರಾಜರು ಪ್ರಶ್ನಿಸಿದಾಗ, ಆ ಸವಾಲನ್ನು ಒಪ್ಪಿ, ನಿಗದಿತವಾಗಿದ್ದ ಎರಡು ತಿಂಗಳ ಅವಧಿಗೆ ಬದಲಾಗಿ ಎರಡು ದಿನಗಳಲ್ಲಿ ಚಾಮುಂಡೇಶ್ವರಿಯ ಮೇಲೆ ಒಂದು ಕೀರ್ತನೆಯನ್ನು ನುಡಿಸಿ ಅವರ ಮೆಚ್ಚುಗೆಗೆ ಪಾತ್ರರಾದವರು, ಪ್ರತಿಭಾವಂತ ಶೇಷಣ್ಣನವರ ಮೊಮ್ಮಗನಾದ ಸ್ವರಮೂರ್ತಿ ವಿ.ಎನ್. ರಾಯರು. ಹೀಗೆ ಒಬ್ಬೊಬ್ಬರೂ ಸಹ ಸಂಗೀತದ ಇತಿಹಾಸದಲ್ಲಿ ತಮ್ಮ ಕೊಡುಗೆಯನ್ನೂ, ಹೆಸರನ್ನೂ ಶಾಶ್ವತವಾಗಿ ದಾಖಲಿಸಿದ್ದಾರೆ.

ಪ್ರತಿಕ್ರಿಯಿಸಿ: feedback@sudha.co.in